# ಅನಿಕೇತನ ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh Bengaluru City University

ಆಗು ನೀ ಅನಿಕೇತನ
BE BOUNDLESS

ಸಂಪುಟ 01 | ಸಂಚಿಕೆ 11 | ಬೆಂಗಳೂರು | September 2026 | ಪುಟ 01


# MRICS–2026 “AI University Soon”: Priyank Kharge

## Wolverhampton Bengaluru Centre Takes Centre Stage in Global Research and AI Innovation



*Minister Priyank Kharge unveiling JARIS journal along with dignitaries*

Dr. Manmohan Singh Bengaluru City University hosted MRICS–2026, the first edition of the Multidisciplinary Research and Innovation Conference Series, through its Wolverhampton–Bengaluru Centre for Research and Innovation (WBC R&I), in collaboration with the University of Wolverhampton, UK on 5th and 6th August 2026 at Jnana Jyothi auditorium, Central College, on the theme *“Leveraging Artificial Intelligence to Advance Sustainable Development Goals.”*

The conference was inaugurated by Mr. Priyank Kharge, Minister for Home Affairs, IT & BT and E-Governance, Government of Karnataka, who highlighted Karnataka’s leadership role in technology and digital transformation. He spoke about the evolution of e-Governance towards “Intelligent Governance (I-Governance)”, where AI can enable smarter decision-making, efficient public services, greater transparency and data-driven policymaking.

The event brought together a distinguished international and national academic leadership. Prof. Ritika Sinha, Director, WBC R&I, Dr. MSBCU, welcomed the gathering and articulated the Centre’s vision of creating a globally connected research ecosystem linking academia, industry and government.

Prof. Suresh Renukappa, Director, WBC R&I, UOW, and Prof. Subhashini Suresh, Joint Director, WBC R&I, University of Wolverhampton, presented MRICS as an international platform for multidisciplinary research and innovation. Dr. T.N. Thandava Gowda, Joint Director, WBC R&I, presented the WBC Vision Handbook, detailing the Centre’s vision, mission, research roadmap and strategic goals for 2030.

A major highlight of the inaugural programme was the release of the Conference Proceedings and the Journal of Advanced Research and Innovation Studies (JARIS), further strengthening the conference’s research orientation. Prof. B.C. Bhagavan, Vice Chancellor, Rajiv Gandhi University of Health Sciences, highlighted the possibilities of AI and interdisciplinary research in higher education and healthcare.

Delivering the keynote address, Prof. Tonny Veenith, Royal Wolverhampton NHS Trust, UK, brought an international perspective on responsible AI applications in healthcare, research and sustainable development.

The conference also demonstrated the growing importance of industry–academia partnerships. An MoU was exchanged between Dr. Manmohan Singh Bengaluru City University and SONA SCLAE, represented by Mr. Thyagu Valiyappa, CEO, SONA Groups and SCALE. Mr. Sathish Naraharimurthy, CEO & Managing Director, Roombr Technologies Pvt. Ltd., highlighted the transformative possibilities of immersive technologies and AI-enabled learning environments.

Prof. Ramesh B.,Vice Chancellor, Dr.MSBCU, in his presidential address, reaffirmed the University’s commitment to promoting multidisciplinary research, innovation and global academic partnerships. He emphasised on the importance of bringing together multiple Public Universities from different disciplines to work on problem solving innovative solutions. Dr. Deeksha.S., Co-ordinator, WBC R&I. delivered vote of thanks.

**Valedictory Session**

Prof. Lingaraj Gandhi, Former VC, Bengaluru City University, in his valedictory address, described AI as *“a good servant and a bad master”* while cautioning against allowing Artificial Intelligence to take control of policy and critical decision-making. He emphasised that technology must remain a tool serving the humanity and called for a greater attention to Social Sciences and Humanities alongside technology-driven education.

Smt. K. Ratnaprabha, Retired Chief Secretary, GoK, observed that although AI is a very powerful tool, it cannot replicate the creative capacity of the human brain and urged young people to use it judiciously to advance sustainable development.

Prof. S.R.Niranjana, Vice-Chairman-Karnataka State Higher Education Council, delivered Keynote address in the validectory session. Prof. Suresh Renukappa, Prof. Subhashini Suresh, Madhusudana Murthy, Prof. Ritika Sinha and Dr.T.N. Thandava Gowda were present on the occasion. Vote of thanks was proposed by Dr. Shreesha, Faculty, BCUSMS.

**-Dr. Deekha S**
**Faculty of Commerce**

## Best Research Paper Award Winners



Dr. Sujatha Swamy and Mrs. Satyasree Balijepally, Faculty, Centre for Global Languages, are the Author and Co-author, respectively, of the research paper titled *“Exploring Literary Movements with Visual Art and Artificial Intelligence,”* which has been awarded the Best Research Paper Award.



Dr. Mary Josephine M. and Ms. Nikita S., Faculty, Department of Commerce, are the Author and Co-author, respectively, of the research paper *“Impact of AI-Driven Corporate Governance Practices on Organisational Risk Management Effectiveness: Empirical Evidence from Indian Companies”*

## ರಾಷ್ಟ್ರೀಯ ಕ್ರೀಡಾ ದಿನಾಚರಣೆ



National Sports Day was celeberated on 29th August 2026 at Central College Rajaji hall. Vice-Chancellor Prof. Ramesh. B., Registrar Naveen Joseph.A. and Sports Coordinator Mohammed Sibgatulla paid floral tributes to Padmashree Major Dhyanchand, wizard of Indian Hockey.

## World Photography Day



Dr. MSBCU Journalism students visited Photo Journalism exhibition organised by Photojournalists association of Bengaluru at Chitra Kala Parishat as part of the world photography day celebrations on 20th August 2026. Senior Photo Journalist Gopinathan guided the students.

# ಉದ್ಯೋಗ ಮೇಳ–ವಿಶೇಷ ಚೇತನರಿಗೂ ಉತ್ತೇಜನ



ಉದ್ಯೋಗ ಮೇಳದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಮತ್ತು ವಿಶೇಷ ಚೇತನರು.

ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ಸಹಯೋಗದಲ್ಲಿ ಸಮರ್ಥನಂ ಟ್ರಸ್ಟ್ ವತಿಯಿಂದ ವಿಶೇಷ ಚೇತನರೂ ಸೇರಿದಂತೆ ಆಸಕ್ತ ವಿದ್ಯಾರ್ಥಿ– ಯುವಜನರಿಗಾಗಿ ಸೆಂಟ್ರಲ್ ಕಾಲೇಜಿನ ನೂತನ ಶೈಕ್ಷಣಿಕ ವಿಭಾಗದ ಕಟ್ಟಡದಲ್ಲಿ ಆಗಸ್ಟ್ 18ರಂದು ಉದ್ಯೋಗ ಮೇಳ ಏರ್ಪಡಿಸಲಾಗಿತ್ತು. ಉದ್ಯೋಗ ಮೇಳವನ್ನು ಉದ್ಘಾಟಿಸಿದ ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ನಿರ್ದೇಶಕರಾದ ಪ್ರೊ. ರಿತಿಕಾ ಸಿನ್ಹಾ, ವಿಶೇಷ ಚೇತನರು ಸಕಾರಾತ್ಮಕ ಮನೋಭಾವ ಮತ್ತು ಆತ್ಮವಿಶ್ವಾಸದಿಂದ ಉತ್ತಮ ಬದುಕು ರೂಪಿಸಿಕೊಳ್ಳಲು ಮುಂದಾಗಬೇಕೆಂದುಸಲಹೆಯಿತ್ತರು. ಪ್ರಾಸ್ತಾವಿಕವಾಗಿ ಮಾತನಾಡಿದ ಸಮರ್ಥನಂ ಟ್ರಸ್ಟ್‌ನ ಉದ್ಯೋಗ ನಿಯೋಜನೆ ನಿರ್ದೇಶಕರಾದ ಕೆ. ಸತೀಶ್, ಕಳೆದ ಐದಾರು ವರ್ಷಗಳಲ್ಲಿ ಸುಮಾರು 30 ಸಾವಿರ ವಿಶೇಷ ಚೇತನರಿಗೆ ಉದ್ಯೋಗ ಕಲ್ಪಿಸಿದ್ದು ದೇಶದಲ್ಲಿ ಯುವತಿಯರೂ ಸಹ ಸೇರಿದಂತೆ ಒಂದು ಲಕ್ಷ ವಿಶೇಷ ಚೇತನ–ರಿಗೆ ಉನ್ನತ ಶಿಕ್ಷಣ ಸೌಲಭ್ಯ ಒದಗಿಸಿರುವುದಾಗಿ ವಿವರಿಸಿದರು. ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕರಾದ ಡಾ.ಟಿ.ಎನ್.ತಾಂಡವಗೌಡ ಮಾತನಾಡಿ, ವಿಶೇಷ ಚೇತನರು ಸೂಕ್ಷ್ಮಮತಿಗಳು ಮತ್ತು ಮಾನವೀಯ ಗುಣವುಳ್ಳವರಾಗಿದ್ದು ಜ್ಞಾನ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳಬೇಕೆಂದು ಉತ್ತೇಜಿಸಿದರು.

ಸಮರ್ಥನಂ ಟ್ರಸ್ಟ್‌ನ ನವೀನ್ ಶೌರಿ ಕಾರ್ಯಕ್ರಮ ನಿರೂಪಿಸಿದರು.ವಿಶ್ವವಿದ್ಯಾನಿಲಯದ ತರಬೇತಿ ಮತ್ತು ನಿಯೋಜನೆ ಶಾಖೆ ಅಧಿಕಾರಿಯಾದ ಹರ್ಷ ಮತ್ತು ತಾಂತ್ರಿಕ ಸಹಾಯಕರಾದ ಸುಷ್ಮಾ ಉಪಸ್ಥಿತರಿದ್ದರು. ಉದ್ಯೋಗ ಮೇಳದಲ್ಲಿ ವಿವಿಧ ರಂಗಗಳ ಒಟ್ಟು 27 ಕಂಪನಿಗಳು ಹಾಗೂ ವಿಶೇಷ ಚೇತನರೂ ಸೇರಿದಂತೆ 404 ಆಕಾಂಕ್ಷಿಗಳು ಪಾಲ್ಗೊಂಡಿದ್ದರು. ಸಂದರ್ಶನದ ನಂತರ 59 ಅಭ್ಯರ್ಥಿಗಳಿಗೆ ಉದ್ಯೋಗ ನಿಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಯಿತು. ಅಲ್ಲದೆ ಇತರೆ 151 ಅಭ್ಯರ್ಥಿಗಳನ್ನು ನೇಮಕಾತಿಯ ಮುಂದಿನ ಪ್ರಕ್ರಿಯೆಗೆ ಅರ್ಹತಾ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳಲಾಯಿತು.

# ವಿ.ವಿ ಮಹಿಳಾ ಘಟಕ ಕಾಲೇಜಿನ ವಾರ್ಷಿಕ ಸ್ವಾಗತ ಸಮಾರಂಭ

ವಿಶ್ವವಿದ್ಯಾನಿಲಯದ ಮಹಿಳಾ ಘಟಕ ಕಾಲೇಜು, ಮಲ್ಲೇಶ್ವರಂ ನಲ್ಲಿ 2026 –27ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭವನ್ನು ಶನಿವಾರ ಹಮ್ಮಿಕೊಳ್ಳಲಾಗಿತ್ತು.

ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್ .ಬಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಚಲನಚಿತ್ರ ನಿರ್ದೇಶಕ ಹಾಗೂ ನಟರಾದ ರಘುರಾಮ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ವಿಶ್ವವಿದ್ಯಾನಿಲಯದ ಡೀನರಾದ ಪ್ರೊ. ಜ್ಯೋತಿ ವೆಂಕಟೇಶ್ ಹಾಗೂ ರೋಟರಿ ಬೆಂಗಳೂರು ಪಶ್ಚಿಮ ವಿಭಾಗದ ಅಧ್ಯಕ್ಷರಾದ ಡಾ. ರಾಜೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಹೇಮಾ ಮಾಲಿನಿ



ವಿಶ್ವವಿದ್ಯಾನಿಲಯದ ಮಹಿಳಾ ಘಟಕ ಕಾಲೇಜು, ಮಲ್ಲೇಶ್ವರಂ ಸ್ವಾಗತ ಸಮಾರಂಭದ ಉದ್ಘಾಟಣೆ

ಅತಿಥಿಗಳನ್ನು ಸ್ವಾಗತಿಸಿದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ನಟ ರಘುರಾಮ್ ರವರು ಆತ್ಮವಿಶ್ವಾಸ,ಪರಿಶ್ರಮ ಮತ್ತು ದೊಡ್ಡ ಕನಸುಗಳನ್ನು ಕಾಣುವ ಮಹತ್ವವನ್ನು ಕು–ರಿತು ವಿವರಿಸಿದರು.

ಪ್ರೊ.ಜ್ಯೋತಿ ವೆಂಕಟೇಶ್ ರವರು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಶ್ರೇಷ್ಠತೆಯನ್ನು ಸಾಧಿಸುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ.ರಮೇಶ್. ಬಿ.ರವರು ವಿದ್ಯಾರ್ಥಿನಿಯ–ರಿಗೆ ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯ ಹೊಸ ಕೋರ್ಸುಗಳನ್ನು ಪರಿಚಯಿಸುತ್ತಿದೆ ಎಂದುತಿಳಿಸಿದರು.

ವಿದ್ಯಾರ್ಥಿನಿಯರು ಕಲಿಕೆಯ ಜೊತೆಗೆ ಪಠ್ಯೇತರ ಚಟುವಟಿ–ಕೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ಕಾಲೇಜು ಜೀವನದ ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳುವಂತೆ ಅವರು ಸಲಹೆಯಿತ್ತರು. ಕಾರ್ಯಕ್ರಮದ ಅಂಗವಾಗಿ ನಾಟಕ ಮತ್ತು ನೃತ್ಯ ಸೇ–ರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಉಪನ್ಯಾಸಕಿ ವಿದ್ಯಾಶ್ರೀ ವಂದನಾರ್ಪಣೆ ನೆರವೇರಿಸಿದರು.

## ಸ್ವಾತಂತ್ರ್ಯ ಚಳವಳಿ – ವಿದ್ಯಾರ್ಥಿಗಳ ಬಲಿದಾನ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಬೆಂಗಳೂರಿಗರೂ ಸಕ್ರಿಯ ಪಾತ್ರ ವಹಿಸಿದ್ದು ವಿದ್ಯಾರ್ಥಿಗಳ ಬಲಿದಾನದ ಕೆಲ ಘಟನೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. 1921ರಲ್ಲಿ ವೇಲ್ಸ್ ರಾಜಕುಮಾರನ ಭೇಟಿ ವಿರೋಧಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಜವಳಿ ಗಿರಣಿಗಳ ಕಾರ್ಮಿಕರು, ಸೆಂಟ್ರಲ್ ಕಾಲೇಜ್, ಸರ್ಕಾರಿ ಇಂಜಿನಿಯ–ರಿಂಗ್ ಕಾಲೇಜ್(ಯುವಿಸಿಇ), ಕಾನೂನು ಕಾಲೇಜು ಮತ್ತು ಮಹಾರಾಣಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಜೊತೆಗೂಡಿ ಬೃಹತ್ ಪ್ರತಿಭಟನೆ ನಡೆಸಿದ್ದರು. 1937ರ ಅಕ್ಟೋಬರ್‌ನಲ್ಲಿ ಪೊಲೀಸ್ ನಿರ್ಬಂಧವನ್ನು ಉಲ್ಲಂಘಿಸಿ ಬನಪ್ಪ ಪಾರ್ಕ್‌ನಲ್ಲಿ (ಹಲಸೂರು ಗೇಟ್ ಪೊಲೀಸ್ ಠಾಣೆ ಬಳಿ) ಭಾಷಣ ಮಾಡಿದ ಬಾಂಬೆ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಫ್.ನಾ–ರಿಮನ್‌ರನ್ನು ಪೊಲೀಸರು ಬಂಧಿಸಿದರು. ಇದನ್ನು ಖಂಡಿಸಿ ಸರ್ಕಾರಿ ಕಲಾ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಬೀದಿಗಳಿದು ಪ್ರತಿಭಟಿಸಿದಾಗ ಕಲ್ಲುತೂರಾಟ ಮತ್ತು ಲಾಠಿ ಪ್ರಹಾರ ನಡೆದು ಓರ್ವ ವಿದ್ಯಾರ್ಥಿ ಪೊಲೀಸ್ ಗೋಲಿಬಾರ್‌ನಲ್ಲಿ ಮೃತಪಟ್ಟು ಇತರೆ 73 ಮಂದಿ ಗಾಯಗೊಂಡರು. 1942 ಆಗಸ್ಟ್‌ನಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆಸಲಾದ ಪ್ರತಿಭಟನೆ ವಿಕೋಪಕ್ಕೆ ತಿರುಗಿ ಸೆಂಟ್ರಲ್ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು ಪೊಲೀಸ್ ಕ್ರೌರ್ಯಕ್ಕೆ ಬಲಿಯಾದರು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳೆಂದು ಗುರುತಿಸಲಾದ ಶಾಮಣ್ಣ ಬಿನ್ ಬೇಟೆ ರಂಗಪ್ಪ, ಜಿ.ವಿ. ತಿರುಮಲಯ್ಯ, ಪ್ರಹ್ಲಾದ್ ಶೆಟ್ಟಿ ಮತ್ತು ಗುಂಡಪ್ಪ ಪ್ರಾಣಾರ್ಪಣೆ ಮಾಡಿದರು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಎಚ್.ಎಸ್.ದೊರೆಸ್ವಾಮಿಯವರು ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿದ್ದರು. ಸ್ವಾತಂತ್ರ್ಯ ರಜತೋತ್ಸವ ಸಂದರ್ಭದಲ್ಲಿ (1972) ಭಾರತ ಸರ್ಕಾರ ಪೊಲೀಸ್ ಗೋಲಿಬಾರ್ ನಡೆದ ಮೈಸೂರು ಬ್ಯಾಂಕ್ ವೃತ್ತದ ಆ ಸ್ಥಳದಲ್ಲಿ (ಶನಿದೇವರ ದೇವಾಲಯ ಮುಂಭಾಗ) ಹುತಾತ್ಮ ಸ್ಮಾರಕ ಸ್ತಂಭವನ್ನು ಪ್ರತಿಷ್ಠಾಪಿಸಿದೆ.



ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ (ಶನಿದೇವರ ದೇವಾಲಯದ ಬಳಿ) ಹುತಾತ್ಮ ಸ್ತಂಭ

# Dept. of Commerce- Syllabus Orientation Workshop

The Department of Studies and Research in Commerce, Dr. MSBCU, in association with the Bengaluru City University Teachers' Council of Commerce and Management (BCUTCCM), organised a Syllabus Orientation Workshop for B.Com. BBA and BBA (Aviation Management) students on 11th August 2026.

The programme was inaugurated by P. Puttanna, Member of Karnataka Legislative Council and Prof. S. R. Niranjana, Vice Chairman, Karnataka State Higher Education Council, delivered the keynote address. Prof. Ramesh.B. Vice-Chancellor, Dr.MSBCU, presided over the programme. Prof. Ramesh B. Kudenatti, Registrar (Evaluation), Vijayalakshmi M.V., FO, Prof. Jalaja K.R., Chairperson Dept.



*Dignitaries Inaugurating the Program by lighting the lamp*

of Commerce, and BCUTCCM Office bearers—Dr. H. Bhavani, President; Dr. C.Nagaraja, General Secretary; and Prof. H.R.Padmanabha, Treasurer attended the event. Principals, HoDs and faculty members of Commerce and Management from all affiliated colleges of Dr. MSBCU also participated.

In his inaugural address, P. Puttanna emphasised the need for updating and revising the syllabus and curriculum from time to time to ensure that students acquire relevant knowledge and skills and gain better employment opportunities.

The Vice-Chancellor, Prof. Ramesh.B. appreciated the valuable contributions of Commerce and Management teachers towards improving the academic standards. He stressed the importance of strengthening the connection between industry and academia. In his keynote address, Prof. S. R. Niranjana highlighted the importance of higher education in addressing the changing needs of society and industry. He also emphasised the significance of multidisciplinary approaches in higher education and curriculum development.

The welcome address was delivered by Prof. Jalaja K. R. and Dr.C.Nagaraja, General Secretary, BCUTCCM proposed vote of thanks.

# Wizard of Indian Hockey

India is remembering Major Dhyan Chand, who was known as "The Wizard of Hockey." Major Dhyan Chand, one of the greatest hockey players in history, was admired across the world for his extraordinary skills and goal-scoring ability. His contributions to Indian hockey earned him the Padma Bhushan in 1956. India celebrates National Sports Day on his birthday every year. Dhyan Chand's hails from a military background family and developed his skills while serving in the Army. His calm presence and brilliant dribbling helped India win three consecutive Olympic gold medals in 1928 (Amsterdam), 1932 (Los Angeles), and 1936 (Berlin). After retiring from the Army as a Major, he served as coach and continued to contribute to Indian sports. Over the past 100 years, Indian hockey has achieved great success. The men's team has won eight Olympic gold medals, a World Cup title in 1975, and several medals in various tournaments. The women's team has also grown steadily, participating in multiple World Cups and winning the Asian Games in 1982 and the Asia Cup in 2004 and 2017.



*Major Dhyan Chand*

# ಮಾನವನಿಗೆ ಮಾರಕವಾದ ಅದೃಶ್ಯ ಶತ್ರು : ಮೈಕ್ರೋಪ್ಲಾಸ್ಟಿಕ್



–ಸಾಂದರ್ಭಿಕ ಚಿತ್ರ

ಒಂದು ನದಿ ದಡದ ಮೇಲಿರುವ ಸುಂದರವಾದ ಊರು. ಆ ಊರಿನಲ್ಲಿ ಒಂದು ಪುಟ್ಟದಾದ ಸುಂದರ ಕುಟುಂಬ. ಗಂಡ ರಾಮು, ಅವನ ಹೆಂಡತಿ ಲಕ್ಷ್ಮಿ ಹಾಗೂ ಅವರಿಗೆ ಇಬ್ಬರು ಮಕ್ಕಳು– ಪ್ರೀತಿ ಮತ್ತು ಮನೋಜ್. ಮನೋಜ್ ಹುಟ್ಟಿನಿಂದಲೇ ಬುದ್ಧಿಮಾಂದ್ಯ ಮಗು, ಪ್ರೀತಿ ಆರೋಗ್ಯವಂತ ಮಗು. ಲಕ್ಷ್ಮಿ ಮತ್ತು ರಾಮು ರಕ್ತಸಂಬಂಧದಲ್ಲಿ ಮದುವೆಯಾದ ದಂಪತಿಗಳು. ಲಕ್ಷ್ಮಿ ರಾಮುವಿನ ಅಕ್ಕನ ಮಗಳು. ಹಾಗಾಗಿ ಅವರ ಮಗ ಮನೋಜ್ ಹುಟ್ಟಿನಿಂದ ಅಂಗವೈಕಲ್ಯ ಹೊಂದಿದ್ದನು. ರಾಮು ತನ್ನದೇ ಊರಿನಲ್ಲಿರುವ ಪ್ಲಾಸ್ಟಿಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದನು. ಲಕ್ಷ್ಮಿ ಮನೆಯವರ ಒತ್ತಾಯದಿಂದ ತನ್ನ ಸೋದರಮಾವನನ್ನು ಮದುವೆಯಾಗಿ ವಿದ್ಯಾಭ್ಯಾಸವನ್ನು ತೊರೆದಿದ್ದಳು. ಈಗ ಅವಳ ಕೆಲಸ ಮನೆಯ ಜವಾಬ್ದಾರಿ ಹಾಗೂ ಇಬ್ಬರು ಮಕ್ಕಳ ಪಾಲನೆ–ಪೋಷಣೆ ಅಷ್ಟೇ. ಮನೆಯಲ್ಲಿ ಯಾವುದೇ ಕೊರತೆ ಇರಲಿಲ್ಲ. ಆದರೆ ತನ್ನ ಮಗನ ಆರೋಗ್ಯ ಹಾಗೂ ಅವನ ಮುಂದಿನ ಭವಿಷ್ಯದ ಚಿಂತೆ ಅವಳನ್ನು ಸದಾ ಕಾಡುತ್ತಿತ್ತು. ಹೀಗೆ ಒಮ್ಮೆ ವೈದ್ಯರ ಬಳಿ ಮನೋಜನ ಆರೋಗ್ಯದ ಕುರಿತು ವಿಚಾರಿಸಲು ಹೋದಾಗ ಧೈರ್ಯ ಮಾಡಿ ತನ್ನನ್ನು ಕಾಡುತ್ತಿದ್ದ ಆತಂಕವನ್ನು ವೈದ್ಯರ ಮುಂದಿಟ್ಟಳು. ವೈದ್ಯರು ವೈದ್ಯಕೀಯ ವಿಜ್ಞಾನದ ಆಧಾರದ ಮೇಲೆ ಅವಳ ಪ್ರಶ್ನೆಗೆ ಉತ್ತರಿಸಿದಾಗ ಅವಳಿಗೆ ಸಮಸ್ಯೆಯ ಮನವರಿಕೆಯಾಯಿತು.

"ಏನೋ ದೇವರು ಇಟ್ಟ ಹಾಗೆ ಆಗಲಿ" ಎಂದು ದಂಪತಿಗಳು ತಮ್ಮ ಜೀವನ ಸಾಗಿಸುತ್ತಿದ್ದರು. ಹೀಗಿರುವಾಗ ಒಂದು ದಿನ ರಾಮುವಿನ ಆರೋಗ್ಯದಲ್ಲಿ ಸ್ವಲ್ಪ ಏರುಪೇರು ಆಗಲು ಶುರುವಾಯಿತು. ದಿನವೂ ವಿಶ್ರಾಂತಿ ಇಲ್ಲದೆ ದುಡಿಯುವುದರಿಂದ ಸುಸ್ತು ಮತ್ತು ಆಯಾಸವಾಗುತ್ತಿದೆ ಎಂದು ಅವನು ಸುಮ್ಮನಾದನು.

ನದಿಯ ದಡದಲ್ಲಿರುವ ಊರಾಗಿದ್ದರಿಂದ ಮಗಳು ಪ್ರೀತಿಯೊಂದಿಗೆ ವಾರಕ್ಕೊಮ್ಮೆ ನದಿಯ ಬಳಿ ಹೋಗಿ ಮೀನು ಹಿಡಿದು, ಅಡುಗೆ ಮಾಡಿ ತಿನ್ನುವುದು ಅವರ ಖಾಯಂ ಪರಿಪಾಠವಾಗಿತ್ತು. ಎಲ್ಲವೂ ಚೆನ್ನಾಗಿ ಸಾಗುತ್ತಿತ್ತು, ಆದರೆ ಕ್ರಮೇಣವಾಗಿ ರಾಮುವಿನ ಆರೋಗ್ಯದಲ್ಲಿ ಬದಲಾವಣೆ ಕಾಣಿಸತೊಡಗಿತು.

ಸುಮ್ಮನೆ ಇದ್ದರೂ ಆಯಾಸ, ಎದೆಯಲ್ಲಿ ಉರಿ, ಉಸಿರಾಡಲು ತೊಂದರೆ, ಜೀರ್ಣಾಂಗದ ಸಮಸ್ಯೆಗಳು ಕಾಣಿಸತೊಡಗಿದವು. ಮಗನ ಆರೋಗ್ಯದ ಚಿಂತೆಯ ಜೊತೆಗೆ ಈಗ ಗಂಡನ ಆರೋಗ್ಯದಲ್ಲೂ ಆಗುತ್ತಿರುವ ಬದಲಾವಣೆಗಳನ್ನು ಕಂಡ ಲಕ್ಷ್ಮಿಗೆ ಜೀವನವೇ ಭಾರವಾಗತೊಡಗಿತು. ಒಂದು ದಿನ ಈ ಸಮಸ್ಯೆಗಳು ಉಲ್ಬಣಗೊಂಡಾಗ ಲಕ್ಷ್ಮಿ ರಾಮುವನ್ನು ಆಸ್ಪತ್ರೆಗೆ ಕರೆದುಕೊಯ್ದಳು. ಮೊದಲು ಇದು ಕೇವಲ ಚಿಕ್ಕ ಸಮಸ್ಯೆ, ಏನೂ ತೊಂದರೆ ಇರುವುದಿಲ್ಲ ಎಂದುಕೊಂಡಿದ್ದ ಅವಳಿಗೆ ವೈದ್ಯರ ಮಾತು ಆಘಾತವಾಯಿತು. ವೈದ್ಯರು ಲಕ್ಷ್ಮಿಯನ್ನು ಪ್ರತ್ಯೇಕವಾಗಿ ಕರೆಸಿ ಸೌಮ್ಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಲಾರಂಭಿಸಿದರು.

ಅವಳ ಗಂಡ ಕೆಲಸ ಮಾಡುವ ಫ್ಯಾಕ್ಟರಿ ಬಗ್ಗೆ, ಅವರ ದಿನನಿತ್ಯದ ಜೀವನಶೈಲಿ, ಅವರು ಸೇವಿಸುವ ಆಹಾರ, ಬಳಸುವ ಪ್ಲಾಸ್ಟಿಕ್ ವಸ್ತುಗಳು ಮುಂತಾದ ವಿಷಯಗಳ ಕುರಿತು ವಿಚಾರಿಸಿದರು. ಲಕ್ಷ್ಮಿ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಿದಳು. ಆದರೆ ವೈದ್ಯರು ಈ ಪ್ರಶ್ನೆಗಳನ್ನು ಏಕೆ ಕೇಳುತ್ತಿದ್ದಾರೆ ಎಂಬ ಚಿಂತೆ ಅವಳ ಮನಸ್ಸಿನಲ್ಲಿ ಮೂಡಿತು. ಎಲ್ಲ ಮಾಹಿತಿಯನ್ನು ತಿಳಿದುಕೊಂಡ ವೈದ್ಯರು ರಾಮುವಿಗೆ Plastic Tox Blood Test ಮಾಡಿಸಲು ತಿಳಿಸಿದರು. ಈ ಪರೀಕ್ಷೆಯಲ್ಲಿ ಒಣಗಿಸಿದ ಮಾನವ ರಕ್ತದ ಮಾದರಿಯನ್ನು ಪಡೆದು ಮೈಕ್ರೋಪ್ಲಾಸ್ಟಿಕ್ ಹಾಗೂ ನ್ಯಾನೋಪ್ಲಾಸ್ಟಿಕ್ ಕಣಗಳನ್ನು ಅತ್ಯಾಧುನಿಕ ಸೂಕ್ಷ್ಮದರ್ಶಕದ ಮೂಲಕ ಪರಿಶೀಲಿಸಲಾಗುತ್ತದೆ. ಅದರ ಜೊತೆಗೆ Raman Spectroscopy, Liquid Chromatography–Mass Spectrometry (LC–MS) ಮತ್ತು ಅಗತ್ಯವಿದ್ದರೆ FTIR Spectroscopy, Pyrolysis–GC/MS ಸಹಿತ ಇನ್ನೂ ಕೆಲವು ವಿಶೇಷ ಪರೀಕ್ಷೆಗಳನ್ನೂ ಮಾಡಲು ನರ್ಸ್‌ಗೆ ವೈದ್ಯರು ಸೂಚಿಸಿದರು.

"ರಾಮುವಿಗೆ ಹೃದಯ ಸಂಬಂಧಿ ಸಮಸ್ಯೆಗಳು, ಜೀವಕೋಶಗಳು ಮತ್ತು ವಿವಿಧ ಅಂಗಗಳಿಗೆ ಹಾನಿ, ರೋಗನಿರೋಧಕ ಶಕ್ತಿ ಕಡಿಮೆಯಾಗುವುದು, ಜೀರ್ಣಾಂಗದ ತೊಂದರೆಗಳು ಹಾಗೂ ನರಮಂಡಲದ ಮೇಲೆ ದುಷ್ಪರಿಣಾಮ ಉಂಟಾಗಿರುವ ಸಾಧ್ಯತೆ ಇದೆ," ಎಂದು ವೈದ್ಯರು ಹೇಳಿದರು. ಇದನ್ನು ಕೇಳಿದ ಲಕ್ಷ್ಮಿ, "ಇಂತಹ ಸಮಸ್ಯೆಗಳು ನನ್ನ ಗಂಡನಿಗೆ ಹೇಗೆ ಬರಲು ಸಾಧ್ಯ?" ಎಂದು ಕೇಳಿದಳು. ಆಗ ವೈದ್ಯರು, "ರಾಮುವಿನ ರಕ್ತದಲ್ಲಿ ಹಾಗೂ ಇತರ ದೇಹದ ಅಂಗಾಂಗಗಳಲ್ಲಿ ಮೈಕ್ರೋಪ್ಲಾಸ್ಟಿಕ್ ಕಣಗಳು ಸಂಗ್ರಹವಾಗಿರುವ ಸಾಧ್ಯತೆ ಇದೆ. ಅದನ್ನು ಖಚಿತಪಡಿಸಿಕೊಳ್ಳಲು ಈ ಪರೀಕ್ಷೆಗಳನ್ನು ಮಾಡಿಸುತ್ತಿದ್ದೇವೆ," ಎಂದು ತಿಳಿಸಿದರು.

"ಪ್ಲಾಸ್ಟಿಕ್ ಮಣ್ಣಿನಲ್ಲಿ ಹಾಗೂ ನೀರಿನಲ್ಲಿ ಸುಲಭವಾಗಿ ಕರಗುವುದಿಲ್ಲ. ಬಿಸಿ ಆಹಾರವನ್ನು ಪ್ಲಾಸ್ಟಿಕ್ ಪಾತ್ರೆಗಳಲ್ಲಿ ಶೇಖರಿಸಿದಾಗ Polystyrene ಹಾಗೂ ಪ್ಲಾಸ್ಟಿಕ್ ನೀರಿನ ಬಾಟಲಿಗಳಿಂದ PET (Polyethylene Terephthalate) ನಂತಹ ಅತಿಸಣ್ಣ ಪ್ಲಾಸ್ಟಿಕ್ ಕಣಗಳು ಆಹಾರ ಮತ್ತು ನೀರಿನೊಂದಿಗೆ ನಮ್ಮ ದೇಹಕ್ಕೆ ಸೇರಬಹುದು. ಈ ಮೈಕ್ರೋಪ್ಲಾಸ್ಟಿಕ್ ಕಣಗಳು ರಕ್ತದ ಮೂಲಕ ಯಕೃತ್ತು, ಮೂತ್ರಪಿಂಡ, ಮೆದುಳು, ಹೃದಯ ಸೇರಿದಂತೆ ದೇಹದ ವಿವಿಧ ಅಂಗಾಂಗಗಳಲ್ಲಿ ಸಂಗ್ರಹವಾಗಬಹುದು.

ದೀರ್ಘಕಾಲದವರೆಗೆ ಇವು ದೇಹದಲ್ಲಿ ಉಳಿದರೆ ಕ್ಯಾನ್ಸರ್ ಸೇರಿದಂತೆ ಹಲವಾರು ಮಾರಕ ಕಾಯಿಲೆಗಳ ಅಪಾಯ ಹೆಚ್ಚಾಗಬಹುದು. ಈಗ ನಿಮ್ಮ ಗಂಡನ ಆರೋಗ್ಯ ಸಮಸ್ಯೆಗೆ ಇದೂ ಒಂದು ಕಾರಣವಾಗಿರಬಹುದು.

ರಕ್ತ ಪರೀಕ್ಷೆಯ ವರದಿ ಬಂದ ನಂತರ ನಿಖರವಾದ ಕಾರಣವನ್ನು ತಿಳಿಯಬಹುದು," ಎಂದು ಅವರು ವಿವರಿಸಿದರು. ಇದರಿಂದ ಬಹಳ ಆತಂಕಗೊಂಡ ಲಕ್ಷ್ಮಿ "ಹಾಗಾದರೆ ಇದಕ್ಕೆ ಪರಿಹಾರವೇನು?" ಎಂದು ಕೇಳಿದಳು. ಅದಕ್ಕೆ ವೈದ್ಯರು "ಪ್ರಸ್ತುತ ನಮ್ಮಲ್ಲಿ ಮೈಕ್ರೋಪ್ಲಾಸ್ಟಿಕ್ ಕಣಗಳು ದೇಹದಲ್ಲಿ ಇರುವುದನ್ನು ಪತ್ತೆಹಚ್ಚುವ ತಂತ್ರಜ್ಞಾನವಿದೆ. ಆದರೆ ಅವುಗಳನ್ನು ದೇಹದಿಂದ ಸಂಪೂರ್ಣವಾಗಿ ಹೊರಹಾಕುವ ಯಾವುದೇ ಖಚಿತ ಚಿಕಿತ್ಸಾ ವಿಧಾನವನ್ನು ಇನ್ನೂ ಕಂಡುಹಿಡಿಯಲಾಗಿಲ್ಲ. ಆದ್ದರಿಂದ ಚಿಕಿತ್ಸೆಗಿಂತ ತಡೆಗಟ್ಟುವಿಕೆಯೇ ಉತ್ತಮ ಪರಿಹಾರವೆಂದು ಉತ್ತರಿಸಿದರು.

ವೈದ್ಯರ ಮಾತುಗಳನ್ನು ಕೇಳಿದ ಲಕ್ಷ್ಮಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಮಗನ ಆರೋಗ್ಯ ಸಮಸ್ಯೆಗೆ ಕಾರಣವನ್ನು ಒಪ್ಪಿಕೊಳ್ಳುವುದೇ ಅವಳಿಗೆ ಕಷ್ಟವಾಗಿತ್ತು. ಈಗ ತನ್ನ ಗಂಡನೂ ಗಂಭೀರ ಆರೋಗ್ಯ ಸಮಸ್ಯೆಗೆ ಈಡಾಗಿರುವ ಕಟುಸತ್ಯವನ್ನು ಅರಗಿಸಿಕೊಳ್ಳುವುದು ಅವಳಿಗೆ ನುಂಗಲಾರದ ತುತ್ತಾಗಿತ್ತು.

–ಕಾವ್ಯ .ಎನ್. ಕುಲಕರ್ಣಿ &
ಮೈತ್ರಿ .ಕೆ. ಆರ್.
M.Sc Physics

## ಸಾಮಾಜಿಕ ಪರಿಣಾಮದ ಕಥೆ

## Human greediness: The soul searching story of an ill fated woman….

A lavish Mansion in its full glory stood graciously adorned with a beautiful garden along with the fountain at the centre. People in the mansion are more than happy. Inside the same mansion, there was a desolate room with no ventilation or light, where a poor soul was lying half dead. A woman with her hair scattered around her face is crouched in a foetal position. Her body ached as it was covered with bruises, and a hot iron branded some parts of her hands and legs. Who is she? What exactly happened?

**Few months back……**

Ridhima, a 27 year old young, educated and beautiful girl from a wealthy family, is all decked up as a gorgeous bride, all set for her marriage with a lot of dreams in her heart. On the other hand, her father, Dhurai, a wealthy businessman in the city, is giving a 300 sovereign gold, a luxury car, a spacious villa, along



-Picture for Reference

with a few crores of money as dowry to the groom's family, who are equally rich like him. The marriage got over with great pomp, but what about life after marriage? Was it really smooth? Because within the few days of marriage, the people in the mansion, that is her husband Navin and her in-laws, started showing their real colours. Blinded by greediness, they wanted more dowry from Ridhima's father and thus started pestering and blackmailing her. Her husband, who was the puppet of his parents, like a green-eyed monster out of greed, started abusing her physically, verbally and emotionally. He rapes her every night, thrashes her brutally and charred her skin with a hot iron. When she complained about all these to her parents several times and pleaded to take her back, their reaction came as a shock to her. They asked her to 'adjust' with her husband and in-laws because it's a matter of their pride and honour, which will be at stake in the eyes of society.

**Back to the present….**

Ridhima is lying like a corpse after being physically abused by her so-called husband and beaten up badly by her merciless in-laws. Poor she! How badly she silently prayed for death the very moment. Days passed, torture continued, tired from all the suffering and harassment, she decided to end her life, the best way to escape all this. The next morning, Ridhima was found dead with froth in her mouth in the same luxury car that was given by her father as dowry, alongside a last note to her parents that reads: "Sorry, Amma and Appa, I couldn't adjust with my married life as you said. Please forgive me if possible, as I am leaving forever. So, Good bye!" We are in the 21st century and still a woman killing herself for Dowry cruelty, then it is a shame on us and our society.

-Yogalakshmi A,
II MA, English.

## ರಾಷ್ಟ್ರೀಯ ಸದ್ಭಾವನಾ ದಿನಾಚರಣೆ

ರಾಷ್ಟ್ರೀಯ ಸದ್ಭಾವನಾ ದಿನಾಚರಣೆಯ ಅಂಗವಾಗಿ ಆಗಸ್ಟ್ 20 ರಂದು ಡಾ. ಮನಮೋಹನ್‌ಸಿಂಗ್ ಬೆಂಗಳೂರುನಗರವಿಶ್ವವಿದ್ಯಾನಿಲಯದ ನೂತನ ಶೈಕ್ಷಣಿಕ ವಿಭಾಗದಲ್ಲಿ ವಿದ್ಯಾರ್ಥಿಗಳು ಮತ್ತು ಬೋಧಕರು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಪ್ರಭಾರ ಕುಲಸಚಿವರಾದ ಪ್ರೊ.ರಮೇಶ ಬಿ. ಕುಡೇನಟ್ಟಿ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಸಾರಾಂಗ ನಿರ್ದೇಶಕರಾದ ಡಾ. ಟಿ.ಎನ್.ತಾಂಡವಗೌಡ, ಕಲಾ ನಿಕಾಯದ ಡೀನರಾದ ಪ್ರೊ. ಜ್ಯೋತಿ ವೆಂಕಟೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶಿಕ್ಷಕರ ದಿನಾಚರಣೆ ಶುಭಾಶಯ

ಶಿಕ್ಷಕರ ದಿನಾಚರಣೆಯ ಪ್ರಯುಕ್ತ ವಿಶ್ವವಿದ್ಯಾನಿಲಯದ ಬೋಧಕ–ಬೋಧಕೇತರ ಸಿಬ್ಬಂದಿಗೆ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ದಿನಾಂಕಸದ್ಯದಲ್ಲೇಪ್ರಕಟಿಸಲಾಗುವುದು.

Visit **www.bcu.ac.in** for regular updates of Univeristy activities and also read ANIKETANA. Send Reports/Photos to **E-mail id : aniketana@bcu.ac.in**

## ವಿಶ್ವಗುರು ಬಸವಣ್ಣ

ಹುಟ್ಟುತ್ತಲೇ ತೊರೆದು
ಬ್ರಾಹ್ಮಣ್ಯದ ಕಟ್ಟಳೆಯ
ಪ್ರಜ್ವಲಿಸಿದಿರಿ ವೈಚಾರಿಕ
ಕಿಡಿಯಾಗಿ ನೀವು
ಅಜ್ಞಾನದ ಆಚರಣೆಗಳ
ಗಾಢಾಂದದ ಬೇಲಿಯ
ಸು–ವಿಜ್ಞಾನದ ಅಲಗಿನಲಿ
ಕತ್ತರಿಸಿದಿರಿ.
ಮಡಿ–ಮೈಲಿಗೆಯ
ಡಾಂಭಿಕತೆಯ ತಮವನು
ಅರಿವಿನ ಬೆಳಕಿನಲಿ ಬೆಳಗಿದಿರಿ
ಮೇಲು–ಕೀಳಿನ ಜಾತಿಬೇಧದ
ಪಾಚಿಯ
ಮನುಷ್ಯತ್ವದ ತಿಳಿವಿನಲಿ
ತೊಳೆದಿರಿ
ಅಂತರ್ಜಾತಿ ವಿವಾಹಕೆ
ಮುನ್ನುಡಿ ಬರೆದು
ಹರಳಯ್ಯ ಮಧುವರಸನ
ಪಂಕ್ತಿಯಲಿ ಕೂಡಿಸಿದಿರಿ
ಮನುಷ್ಯರೆಲ್ಲಾ ಒಂದೇ
ಎಂಬುವ
ವಿಶ್ವಮಾನವತತ್ವಕೆ ಭಾಷ್ಯ
ಬರೆದಿರಿ
ಮತ್ಸರದ ಅರಮನೆಯಲಿ
ಪ್ರೀತಿಯ ಸೌಧ ಕಟ್ಟಿ
ಅಸಹಾಯಕ ಜನರಿಗೆ
ದಾಸೋಹ ನೀಡಿದಿರಿ
ಕಾಯಕ, ಸಮಾನತೆ ತತ್ವವ
ಜಗಕೆ ಸಾರಿ
ವಿಶ್ವಗುರು ಬಸವಣ್ಣ
ನೀವಾದಿರಿ..

–ಡಾ. ಗೋಪಿ ಎಸ್ ಎಂ
ಅಧ್ಯಾಪಕರು, ಕನ್ನಡ ವಿಭಾಗ

# 80ನೇ ಸ್ವಾತಂತ್ರ್ಯ ದಿನಾಚರಣೆ

## ವಿಶ್ವವಿದ್ಯಾಲಯಗಳು ಡಿಗ್ರಿಗಳನ್ನು ಪೂರೈಸುವ ಕಾರ್ಖಾನೆಗಳಾಗಬಾರದು– ಪ್ರೊ.ರಮೇಶ್.ಬಿ.



ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಕುಲಪತಿಗಳೊಂದಿಗೆ ಸಿಂಡಿಕೇಟ್ ಸದಸ್ಯರು ಮತ್ತು ಅತಿಥಿಗಳು

ವಿಶ್ವವಿದ್ಯಾಲಯಗಳು ಕೇವಲ ಪದವಿ ಪ್ರಮಾಣಪತ್ರಗಳನ್ನು ಪೂರೈಸುವ ಕಾರ್ಖಾನೆಗಳಾಗದೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮೂಲಕ ಅವರನ್ನು ರಾಷ್ಟ್ರ ನಿರ್ಮಾಣದ ಶಿಲ್ಪಿಗಳಾಗಿ ರೂಪಿಸುವ ಜ್ಞಾನ ಕೇಂದ್ರಗಳಾಗಬೇಕೆಂದು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಪ್ರತಿಪಾದಿಸಿರುವರು. ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗಡಿಯಾರ ಗೋಪುರದ ಬಳಿ ತ್ರಿವರ್ಣ ಧ್ವಜಾರೋಹಣ ನೆರವೇರಿಸಿ ಮಹಾತ್ಮ ಗಾಂಧಿ ಮತ್ತು ಡಾ. ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದ ಬಳಿಕ ಅವರು 80ನೇ ಸ್ವಾತಂತ್ರ್ಯೋತ್ಸವದ ವಿಶೇಷ ಮಹತ್ವವನ್ನು ವಿವರಿಸಿದರು. ಭಾರತ ಬಹುತ್ವದ ನೆಲೆಗಟ್ಟಿನ ಸಮಾಜವಾಗಿದ್ದು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಬಿತ್ತಿ ನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಕಳೆದ ಎಂಟು ದಶಕಗಳಲ್ಲಿ ಅಗಾಧ ಪ್ರಗತಿ ಸಾಧಿಸಿ ಇದೀಗ ವಿಶ್ವದ ಆರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿರುವ ಭಾರತದಲ್ಲಿ ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಆಂತರಿಕ ಪ್ರಜಾಪ್ರಭುತ್ವದ ಬಲವರ್ಧನೆಯತ್ತ ಹೆಚ್ಚಿನ ಪ್ರಯತ್ನ ನಡೆಯಬೇಕಿದೆ ಎಂದು ಅವರು ವಿಶ್ಲೇಷಿಸಿದರು. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 134ನೇ ಸ್ಥಾನದಲ್ಲಿರುವ ಭಾರತ ಲಿಂಗ ಅಂತರ ಸೂಚ್ಯಂಕದಲ್ಲೂ ಅಷ್ಟೇ ಹಿಂದಿದೆ. ಆಸ್ತಿ ಹಕ್ಕು, ಅಧಿಕಾರ ಮತ್ತು ಹಕ್ಕುಗಳ ವಿಚಾರದಲ್ಲಿ ಮಹಿಳೆಯರಿಗೆ ಇನ್ನೂ ಸಂಪೂರ್ಣವಾದ ನ್ಯಾಯ ದೊರೆತಿಲ್ಲವೆಂದು ಅವರು ವಿಷಾದಿಸಿದರು. ಭಾರತೀಯ ವಿಶ್ವವಿದ್ಯಾನಿಲಯಗಳನ್ನು ಸಂಶೋಧನೆ ಮತ್ತು ಅನ್ವೇಷಣೆಯ ಉತ್ಕೃಷ್ಟ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವ ಮೂಲಕ ಸಮೃದ್ಧ ಭಾರತ ನಿರ್ಮಾಣಕ್ಕೆ ಮಹತ್ತರ ಕೊಡುಗೆ ನೀಡುವತ್ತ ಗಂಭೀರ ಪ್ರಯತ್ನ ನಡೆಯಬೇಕೆಂದು ಅವರು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಿಂಡಿಕೇಟ್ ಸದಸ್ಯರಾದ ಆಯಿಷಾ ಫರ್ಜಾನ ಮಾತನಾಡಿ, ಸಮಕಾಲೀನ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಸಂದೇಶದ ಉದಾತ್ತ ಆಶಯಗಳನ್ನು ಎತ್ತಿಹಿಡಿದು ಸಮಾಜದಲ್ಲಿ ರಾಷ್ಟ್ರೀಯ ಭಾವೈಕ್ಯತೆ ಗಟ್ಟಿಗೊಳಿಸಲು ಮುಂದಾಗೋಣ ಎಂದು ಹಾರೈಸಿದರು.

ಮತ್ತೋರ್ವ ಸಿಂಡಿಕೇಟ್ ಸದಸ್ಯರಾದ ವಿ. ಶಿವಕುಮಾರ್ ಮಾತನಾಡಿ, ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ದೊರಕಿಸುವತ್ತ ತಕ್ಷಣ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಪಡಿಸಿದರು.

ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ. ಸಿಂಡಿಕೇಟ್ ಸದಸ್ಯರಾದ ಶಿಲ್ಪಶ್ರೀ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಬಿ.ಕೆ.ಗಿರಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ.ಪಿ.ಆರ್. ಚೇತನಾ. ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ಎಂ.ನಿರ್ಮಲ, ಪ್ರೊ.ಮೇಧಾ ಇಟಗಿ ಹುಯಿಲಗೋಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಾರಂಭದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಉಪನ್ಯಾಸಕರಾದ ಡಾ. ಮಂಜು.ಸಿ.ಎನ್ ಮತ್ತು ಡಾ. ಪ್ರಭು. ಬಿ.ಎಂ ಮತ್ತು ವಿದ್ಯಾರ್ಥಿನಿ ಪದ್ಮಿನಿ ದೇಶಭಕ್ತಿ ಗೀತೆಗಳನ್ನು ಹಾಡಿದರು. ರಕ್ಷಾ ಆರ್. ಕುಮಾರ್ ಯೋಧರ ಗೌರವಾರ್ಥ ನೃತ್ಯ ರೂಪಕವನ್ನು ಪ್ರಸ್ತುತಪಡಿಸಿದರು. ಲಂಡನ್‌ನಲ್ಲಿ ನೆಲೆಸಿರುವ ಕುಮಾರಿ ಯುಕ್ತಶ್ರೀ ಸರ್ವರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯ ಕೋರಿದರು. ಉಪನ್ಯಾಸಕರಾದ ಡಾ. ಪ್ರಿಯಾಂಕಾ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ಪ್ರಾಧ್ಯಾಪಕರಾದ ಪ್ರೊ. ಕೆ. ಶಿವಶಂಕರ್ ಸ್ವಾಗತಿಸಿದರು. ಡಾ. ಶ್ರೀನಿವಾಸ್ ವಂದಿಸಿದರು.


ನೂತನ ಧ್ವಜ ಸ್ತಂಭದಲ್ಲಿ ಕುಲಪತಿಯವರಿಂದ ಧ್ವಜಾರೋಹಣೆ

# ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ : ಡಾ. ಎಸ್. ಆರ್. ರಂಗನಾಥನ್ ಚಿರಸ್ಮರಣೆ

ಡಾ .ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗ್ರಂಥಾಲಯದ ವತಿಯಿಂದ 2026 ಆಗಸ್ಟ್ 12 ರಂದು ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಸ್ಮರಣಾರ್ಥಕವಾಗಿ 'ರಾಷ್ಟ್ರೀಯ ಗ್ರಂಥಪಾಲಕರ' ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಸೆಂಟ್ರಲ್ ಕಾಲೇಜು ಆವರಣದಲ್ಲಿ "ಮೊಬೈಲ್ ಬಿಡಿ ಪುಸ್ತಕ ಹಿಡಿ" ಎಂಬ ಘೋಷಣೆದೊಂದಿಗೆ "ಜ್ಞಾನ ಜಾಗೃತಿ ಜಾಥಾ" ನಡೆಸಲಾಯಿತು.
ಕುಲಪತಿಗಳಾದ ಪ್ರೊ. ರಮೇಶ್ ಬಿ. ಕುಲಸಚಿವರಾದ ಎ. ನವೀನ್ ಜೋಸೆಫ್, ಮುಖ್ಯ ಅತಿಥಿಗಳಾದ ಪ್ರೊ. ಎನ್. ಎಸ್. ಹರಿನಾರಾಯಣ ಹಾಗೂ ವಿಶ್ವವಿದ್ಯಾನಿಲಯದ ಪ್ರಭಾರ ಗ್ರಂಥಪಾಲಕರಾದ ಪ್ರೊ.ಪಿ.ಆರ್.ಚೇತನ, ಪ್ರಸಾರಂಗದ ನಿರ್ದೇಶಕರಾದ ಡಾ.ಟಿ.ಎನ್. ತಾಂಡವಗೌಡ, ಮಾಧ್ಯಮ ಸಮಾಲೋಚಕರಾದ ಎಸ್. ಆರ್. ಆರಾಧ್ಯ ಹಾಗೂ ಗ್ರಂಥಾಲಯ ಸಿಬ್ಬಂದಿ, ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳು ಜಾಥಾದಲ್ಲಿ ಭಾಗವಹಿಸಿದ್ದರು.



ಸೆಂಟ್ರಲ್ ಕಾಲೇಜ್ ಗ್ರಂಥಾಲಯದಿಂದ ಜ್ಞಾನಜಾಗೃತಿ ಜಾಥಾಗೆ ಚಾಲನೆ

ತದನಂತರ ನೂತನ ಶೈಕ್ಷಣಿಕ ಕಟ್ಟಡದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಕುಲಸಚಿವರಾದ ಎ. ನವೀನ್ ಜೋಸೆಫ್‌ರವರು ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಅಭಿರುಚಿಯನ್ನು ಉತ್ತೇಜಿಸಲು ಪದವಿ ಹಾಗೂ ಸ್ನಾತಕೋತ್ತರ ವಿಭಾಗಗಳ ವೇಳಾಪಟ್ಟಿಯಲ್ಲಿ "ಗ್ರಂಥಾಲಯ ದಿನ" ವನ್ನು ಅಳವಡಿಸುವುದಾಗಿ ಪ್ರಕಟಿಸಿದರು. ಮೊಬೈಲ್ ಮೂಲಕ ಅಂಗೈನಲ್ಲೇ ಪ್ರಪಂಚವನ್ನು ನೋಡುವ ಅವಕಾಶ ಇದೀಗ ಲಭ್ಯವಾಗಿದ್ದರೂ ಪವಿತ್ರ ಜ್ಞಾನ ದೇಗುಲಗಳಾದ ಗ್ರಂಥಾಲಯಗಳಲ್ಲಿ ಅಗಾಧ ಜ್ಞಾನ ಸಂಪತ್ತು ಅಡಗಿದೆ ಎಂದು ಅವರು ವಿವರಿಸಿದರು. ಪ್ರತಿದಿನವೂ ಗ್ರಂಥಾಲಯಕ್ಕೆ ಭೇಟಿಯಿತ್ತು ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಅವರು ಪ್ರೇರೇಪಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿ.ವಿ. ಗ್ರಂಥಾಲಯ ವಿಜ್ಞಾನ ಮುಖ್ಯಸ್ಥರಾದ ಪ್ರೊ.,ಎನ್.ಎಸ್. ಹರಿನಾರಾಯಣ ಮಾತನಾಡಿ ಕೃತಕ ಬುದ್ಧಿಮತ್ತೆ ಪ್ರಭಾವದಿಂದ ಓದುವ ಮತ್ತು ಬರವಣಿಗೆಯ ಅಭ್ಯಾಸ ಕುಂಟಿತವಾಗಿದೆ ಎಂದು ವಿಶ್ಲೇಷಿಸಿದರು. ಜ್ಞಾನಾರ್ಜನೆಯ ಗುರಿಸಾಧನೆ ಇದೀಗ ಕವಲುದಾರಿಯಲ್ಲಿದ್ದು ಡಿಜಿಟಲ್ ಮಾಧ್ಯಮದ ಬಳಕೆಯ ಜೊತೆ ಜೊತೆಗೆ ಪುಸ್ತಕಗಳನ್ನು ಓದುವ ಸಂಸ್ಕೃತಿಯನ್ನೂ ಯುವ ಪೀಳಿಗೆಯಲ್ಲಿ ಬೆಳೆಸಬೇಕಾದ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು. ಮೊಬೈಲ್‌ಗಿಂತ ಪುಸ್ತಕದ ಅಧ್ಯಯನ ಹೆಚ್ಚಿನ ಏಕಾಗ್ರತೆ ಮತ್ತು ಸ್ಮರಣೆ ಶಕ್ತಿಯನ್ನು ಒದಗಿಸಬಲ್ಲದೆಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಭಾರ ಗ್ರಂಥಪಾಲಕರಾದ ಪ್ರೊ.ಪಿ.ಆರ್. ಚೇತನಾರವರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಡಿಜಿಟಲೀಕರಣಗೊಂಡಿದ್ದು ಆಧುನಿಕ ತಂತ್ರಜ್ಞಾನದ ಸೌಲಭ್ಯವನ್ನು ಬಳಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಮನವಿಮಾಡಿದರು. ಭಾರತೀಯ ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್. ರಂಗನಾಥನ್‌ರವರಿಗೆ ಪುಷ್ಪ ನಮನ ಸಲ್ಲಿಸಿದ ನಂತರ ಗಣ್ಯರು ಅವರ ಬದುಕು ಮತ್ತು ಸಾಧನೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.
ಗ್ರಂಥಪಾಲಕರ ದಿನಾಚರಣೆಯ ಪ್ರಯುಕ್ತ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣಪತ್ರಗಳನ್ನು ವಿತರಿಸಲಾಯಿತು.
ಪ್ರಸಾರಾಂಗದ ನಿರ್ದೇಶಕರಾದ ಡಾ. ಟಿ.ಎನ್. ತಾಂಡವಗೌಡ ಉಪಸ್ಥಿತರಿದ್ದರು.
ವಿಶ್ವವಿದ್ಯಾನಿಲಯ ಗ್ರಂಥಾಲಯ ಸಹಾಯಕರಾದ ಬಿ.ಕೆ. ಮಮತ ಚಟುವಟಿಕೆ ವರದಿ ಮಂಡಿಸಿದರು. ಪಿ. ಪುರುಷೋತ್ತಮ ಕಾರ್ಯಕ್ರಮ ನಿರೂಪಿಸಿದರು ಮತ್ತು ಸಂತೋಷ್ ವಂದಿಸಿದರು.

**–ಸಂತೋಷ್. ಎ**

# ನಮ್ಮ ನಡೆ ಗ್ರಂಥಾಲಯದ ಕಡೆ

ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಅಭ್ಯಾಸವನ್ನು ಉತ್ತೇಜಿಸಲು ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್‌ನಲ್ಲಿ ಇದೀಗ ವಿನೂತನ ಅಭಿಯಾನ ಆರಂಭಿಸಲಾಗಿದೆ. 2026 ಸೆಪ್ಟಂಬರ್ 1 ರಿಂದ ಪ್ರತಿಯೊಂದು ವಿಭಾಗದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಪ್ರತಿ ತಿಂಗಳು ನಿರ್ದಿಷ್ಟಪಡಿಸಿದ ದಿನಾಂಕದಂದು ಮಧ್ಯಾಹ್ನ 2ರಿಂದ 5 ರವರೆಗೆ ಗ್ರಂಥಾಲಯದಲ್ಲಿ ಹಾಜರಿದ್ದು ಪಠ್ಯಪುಸ್ತಕ ಮತ್ತು ಇತರೆ ಗ್ರಂಥಗಳ ಅಧ್ಯಯನ ಕೈಗೊಳ್ಳುವರು.

ಇದಕ್ಕೆ ಸಂಬಂಧಿಸಿದಂತೆ ಅಧಿಕೃತ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಸೆಪ್ಟಂಬರ್ ತಿಂಗಳ ವಿಭಾಗಾವಾರು ಗ್ರಂಥಾಲಯ ಭೇಟಿ ಮಾರ್ಗಸೂಚಿಯನ್ನು ಎಲ್ಲಾ ವಿಭಾಗ ಮುಖ್ಯಸ್ಥರಿಗೂ ರವಾನಿಸಲಾಗಿದೆ. ಹದಿಹರೆಯದವರಲ್ಲಿ ಮೊಬೈಲ್ ಗೀಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಮತ್ತೆ ಗ್ರಂಥಾಲಯದತ್ತ ಆಕರ್ಷಿಸಲು ಇದೊಂದು ಮಾದರಿ ಪ್ರಯೋಗವಾಗಿದೆ.

## ಅನಿಕೇತನ ವಾರ್ಷಿಕ ವಿಶೇಷ ಸಂಚಿಕೆ

ಕರ್ನಾಟಕ ರಾಜ್ಯೋತ್ಸವ ದಿನದಂದು ಉದಯಿಸಿದ ನಿಮ್ಮೆಲ್ಲರ ಅಚ್ಚುಮೆಚ್ಚಿನ 'ಅನಿಕೇತನ' ಮಾಸ ಪತ್ರಿಕೆ ಇದೀಗ ಒಂದು ವರ್ಷದ ಮೈಲಿಗಲ್ಲಿನತ್ತ ದಾಪುಗಾಲು ಹಾಕುತ್ತಿದೆ.

2026 ನವಂಬರ್ 1ರಂದು ಚೊಚ್ಚಲ ವಾರ್ಷಿಕ ವಿಶೇಷ ಸಂಚಿಕೆ ಪ್ರಕಟವಾಗಲಿದೆ. ಈ ಸಂಚಿಕೆಗಾಗಿ ವಿದ್ಯಾರ್ಥಿಗಳಿಂದ ಸಣ್ಣ ಕಥೆ, ಸ್ವರಚಿತ ಕವನ, ಪ್ರಬಂಧ, ಲೇಖನ, ವ್ಯಂಗ್ಯಚಿತ್ರಗಳನ್ನು ಆಹ್ವಾನಿಸಲಾಗಿದೆ. ಪ್ರತಿ ವಿಭಾಗದಲ್ಲಿ ಅತ್ಯುತ್ತಮ ಮೂರು ಪ್ರವೇಶಗಳಿಗೆ ಸೂಕ್ತ ಬಹುಮಾನ ನೀಡಿ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು ಅಕ್ಟೋಬರ್ 10 ರೊಳಗೆ ಸಮೂಹ ಸಂವಹನ ಪತ್ರಿಕೋದ್ಯಮ ವಿಭಾಗದ ಕಚೇರಿಗೆ ಸಲ್ಲಿಸಬಹುದಾಗಿದೆ.

**ಸಂಪಾದಕೀಯ ಮಂಡಳಿ**
**ಡಾ. ಟಿ. ಎನ್. ತಾಂಡವ ಗೌಡ**
ಪ್ರಸಾರಾಂಗ ನಿರ್ದೇಶಕರು.
**ಎಸ್. ಆರ್. ಆರಾಧ್ಯ**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಗಾಯಿತ್ರಿ ವೈ.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**
**ಪ್ರೊ. ರಮೇಶ್. ಬಿ**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ**
ಡೀನರು, ಶಿಕ್ಷಣ ನಿಕಾಯ
**ಪ್ರೊ. ಜ್ಯೋತಿ ವೆಂಕಟೇಶ್**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ**
ಡೀನರು, ವಿಜ್ಞಾನ ನಿಕಾಯ.
**ಪ್ರೊ. ನಿರ್ಮಲ. ಎಂ**
ಡೀನರು, ವಾಣಿಜ್ಯ ನಿಕಾಯ

**ವಿದ್ಯಾರ್ಥಿ ಸಂಪಾದಕರು**
**ಪೂಜಾಶ್ರೀ,** ಎಂಸಿಜೆ, ದ್ವಿತೀಯ
**Col. ಸಂದೀಪ್,** ಎಂಸಿಜೆ, ಪ್ರಥಮ
**ಸಂಗೀತಾ,**(UCW), ಬಿ.ಎ.ಅಂತಿಮ

**ತಿಂಗಳ ಬುತ್ತಿ**
05/09/2026 ಶಿಕ್ಷಕರ ದಿನಾಚರಣೆ
08/09/2026 ವಿಶ್ವ ಸಾಕ್ಷರತಾ ದಿನ
15/09/2026 ಸರ್ ಎಂ. ವಿಶ್ವೇಶ್ವರಯ್ಯ ಜನ್ಮದಿನ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ
29/09/2026 ವಿಶ್ವ ಹೃದಯ ದಿನ
30/09/2026 ವಿಶ್ವ ಭಾಷಾಂತರ ದಿನ

Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001